


ಎಸ್‌.ಜಿ. ಸಿದ್ಧರಾಮಯ್ಯ
ಕಲೆ: ಪುಂಡಲೀಕ ಕಲ್ಲಿಗನೂರು

# ಮೂಗುಳ್ಳ ಮಹಾಂತರು ಮತ್ತು ಅಹಂಕಾರಿ



ಅದೊಂದು ಸಹಿತತ್ವದ ಪ್ರಾಣವಾಯುವಿನಂಗಳ
ಅಲ್ಲಿಗೆ ಹೊಟ್ಟೆಕೆಟ್ಟ ಅಜ್ಞಾನಿಯೊಬ್ಬನನ್ನು
ತಲೆಕೆಟ್ಟವರೆಲ್ಲಾ ಸೇರಿ ತಂದು ಬಿಡುತ್ತಾರೆ.
ಹೂಸುತ್ತಲೇ ಬಂದ ಅಜ್ಞಾನಿ
ಹೂಸುತ್ತಲೇ ಠೇಂಕರಿಸುತ್ತಾನೆ.
ಜೊತೆಗೆ ಒಳಬಂದ ಕೆಲವರು ಮೂಗುಳ್ಳವರು
ಅಯ್ಯೋ ಅಸಹ್ಯವೇ ಎಂದು
ಮೂಗು ಮುಚ್ಚಿಕೊಂಡು
ಮುಜುಗರಿಸುತ್ತಾರೆ.

ಠೇಂಕಾರಕ್ಕೆ ಬೆದರಿದ ಹಲವರು
ಆಹಾ ಪರಿಮಳವೇ ಎಂದು
ಆಘ್ರಾಣಿಸುತ್ತಾ ಸಂಭ್ರಮಿಸುತ್ತಾರೆ.
ಹೂಸು ಪರಿಮಳವಾಗಿ
ಪ್ರಾಣವಾಯುವೇ ಅಸಹ್ಯವಾಗಿ
ಪರಾಕಿನ ಭಟರಾಗುತ್ತಾರೆ.

ಮೂಗುಳ್ಳವರು ಮೂಗು ಮುಚ್ಚಿಕೊಂಡು
ಅಜ್ಞಾನಕ್ಕೆ ಬುದ್ಧಿ ಹೇಳುತ್ತಾರೆ
ಕೇಳದೆ ಹೂಂಕರಿಸುತ್ತಾ
ಮತ್ತೆ ಮತ್ತೆ ಹೂಸಿದಾಗ ಬೈಯುತ್ತಾರೆ
ಬೈದವರನ್ನ ಬಂಧುಗಳೆಂದು ತಿಳಿಯದ ಅಜ್ಞಾನ
ಅಹಂಕರಿಸುತ್ತಾ ಮೂಗುಳ್ಳವರ
ಮೂಗು ಮುರಿಯತೊಡಗುತ್ತದೆ.

ಮೂಗುಳ್ಳ ಮಹಾಂತರು
ಕಿಟಕಿ ಬಾಗಿಲು ತೆರೆದು
ಪ್ರಾಣವಾಯುವಿಗೆ ಹಂಬಲಿಸುತ್ತಾರೆ.
ಅಹಂಕಾರಕ್ಕೆ ಕೋಡುಬಂದು
ಕಿಟಕಿ ಬಾಗಿಲುಗಳ ಬಂದುಮಾಡುತ್ತದೆ.

ರೋಸಿಹೋದ ಮೂಗುಳ್ಳಮಹಾಂತರು
ಹೂಸುಬಡುಕ ರೋಗಿಯ ಹೊರದಬ್ಬಿ
ಕಿಟಕಿ ಬಾಗಿಲು ತೆರೆಯುತ್ತಾರೆ.
ಪ್ರಾಣವಾಯುವಿನಂಗಳಕ್ಕೆ
ಪ್ರಾಣಶಕ್ತಿ ಬರಲು ಸಂಭ್ರಮಿಸುತ್ತಾರೆ.

ಪ್ರಾಣಶಕ್ತಿಯ ಜೊತೆಗೆ
ಓ ನನ್ನ ಚೇತನ ಆಗು ನೀ ಅನಿಕೇತನ
ಸಂಭ್ರಮದ ಹೆಜ್ಜೆಗೆ ದನಿಯಾಗುತ್ತದೆ.